

ವ್ಯಾಪಾರಕ್ಕೆಂದು ಬಂದು ಆಡಳಿತದ ಚುಕ್ಕಾಣಿಯನ್ನೇ ಹಿಡಿದ 'ಈಸ್ಟ್ ಇಂಡಿಯಾ ಕಂಪನಿ' ಪ್ರತಿಯೊಂದನ್ನೂ ವ್ಯಾಪಾರಿ ದೃಷ್ಟಿಕೋನದಿಂದಲೇ ನೋಡುತ್ತಿತ್ತು. ಆಗ ಬೆಂಗಳೂರಿನ ಲಾಲ್‌ಬಾಗ್ ಅನಾಯಾಸವಾಗಿ ಉಡುಗೊರೆಯ ರೂಪದಲ್ಲಿ ಬಂದಾಗ ಆಗಿನ ಗೌರ್ನರ್ ಜನರಲ್ ಹೇಸ್ಟಿಂಗ್ಸ್ ಬೇಡವೆನ್ನಲಿಲ್ಲ.

ಕೋಲ್ಕತ್ತದ ಸಸ್ಯೋದ್ಯಾನದ ಸುಪರ್ದಿಗೆ ಲಾಲ್‌ಬಾಗ್ ಉದ್ಯಾನ ಒಳಪಟ್ಟಿತ್ತು. ವಾಲೀಚ್ ಎನ್ನುವ ವ್ಯಕ್ತಿ ಕೋಲ್ಕತ್ತ ಉದ್ಯಾನದ ಮುಖ್ಯಸ್ಥ. ಅವರೇ ಲಾಲ್‌ಬಾಗ್ ಉಸ್ತುವಾರಿಯನ್ನೂ ನೋಡಿಕೊಳ್ಳತೊಡಗಿದರು. ಕೋಲ್ಕತ್ತದಿಂದ ದೂರದಲ್ಲಿದ್ದ ಬೆಂಗಳೂರಿಗೆ ಅವರು ಹೆಚ್ಚಾಗಿ ಬರಲಾಗುತ್ತಿರಲಿಲ್ಲ. ಹೀಗಾಗಿ, ಲಾಲ್‌ಬಾಗ್‌ನಲ್ಲಿದ್ದ ಅಮೂಲ್ಯ ಸಸ್ಯ ಸಂಪತ್ತು ಕಾಪಾಡಲು ಅವರು ಯೋಜನೆಯನ್ನೇನೋ ರೂಪಿಸಿದರು. ಆದರೆ, ಬ್ರಿಟಿಷ್ ಸರ್ಕಾರ ಮಾಡುತ್ತಿದ್ದ ನಿರ್ವಹಣಾ ವೆಚ್ಚಕ್ಕೆ ಲಾಭ ಸಿಗುವಂತಹ ಪರಿಸ್ಥಿತಿ ಲಾಲ್‌ಬಾಗ್‌ನಲ್ಲಿ ಇರಲಿಲ್ಲ.

ವಾಣಿಜ್ಯ ಉದ್ದೇಶಗಳಿಗಾಗಿ ಮರ ಬೆಳೆಯುವ ಸ್ಥಳವೊಂದು ಕಂಪನಿಗೆ ಬೇಕಿತ್ತು. ನಿರ್ವಹಣಾ ವೆಚ್ಚ ತಗ್ಗಿಸಬೇಕಿತ್ತು. ಇಂತಹ ವ್ಯಾಪಾರ ಉದ್ದೇಶಗಳಿಗೆ ಲಾಲ್‌ಬಾಗ್ ಬಳಸಲು ಸಾಧ್ಯವಿರಲಿಲ್ಲ. ಈಸ್ಟ್ ಇಂಡಿಯಾ ಕಂಪನಿಗೆ ಉದ್ಯಾನ ಹೊರೆಯೆನ್ನಿಸತೊಡಗಿತು. ಮೈಸೂರು ಮಹಾರಾಜರ ಆಡಳಿತಕ್ಕೆ ಉದ್ಯಾನವನ್ನು ಹಿಂತಿರುಗಿಸುವ ಮೂಲಕ ಉಡುಗೊರೆಯ ಹೊರೆಯನ್ನು ಇಳಿಸಿಕೊಂಡಿತು ಈಸ್ಟ್ ಇಂಡಿಯಾ ಕಂಪನಿ.

ಲಾಲ್‌ಬಾಗ್ ಹಿಂತಿರುಗಿಸುವ ನಿರ್ಣಯ ಕೈಗೊಳ್ಳಲಿಕ್ಕೆ ಅಂತಹುದೇ ಉದ್ಯಾನವೊಂದು ಬ್ರಿಟಿಷ್ ಸರ್ಕಾರದ ಕಣ್ಣಿಗೆ ಬಿದ್ದುದೂ ಕಾರಣವಾಗಿತ್ತು. ಅದೇ ಉತ್ತರ ಪ್ರದೇಶದ ಷಹರಣ್‌ಪುರ ಉದ್ಯಾನ. ಕೋಲ್ಕತ್ತದಿಂದ 1,000 ಮೈಲಿ ದೂರದ ಷಹರಣ್‌ಪುರದಲ್ಲಿದ್ದ 'ಫರ್ಹಾತ್ ಭಕ್ಷ' ಎಂಬ ಉದ್ಯಾನದ ಮೇಲೆ ಬ್ರಿಟಿಷರ ಕಣ್ಣು ಬಿದ್ದಿತ್ತು.

ಆ ಉದ್ಯಾನ ಕೋಲ್ಕತ್ತಗೆ ಹತ್ತಿರವಾಗಿಯೂ ಇತ್ತು. (ಆಗ ಕೋಲ್ಕತ್ತದಿಂದ ಅಲ್ಲಿಗೆ ಜಲಮಾರ್ಗವೂ ಇತ್ತು. ಇತ್ತೀಚೆಗೆ ಸಂಚಾರಕ್ಕೆ ತೆರವು ಮಾಡಿರುವ ಈ ಜಲಮಾರ್ಗ ಕೋಲ್ಕತ್ತ–ವಾರಣಾಸಿ ನಡುವೆ ಷಹರಣ್‌ಪುರ್ ಬರುತ್ತದೆ).

ಷಹರಣ್‌ಪುರ ಉದ್ಯಾನದಲ್ಲಿ ಕ್ಷಿಪ್ರವಾಗಿ ಬೆಳೆಯುವ ಮರಗಳನ್ನು ಬ್ರಿಟಿಷ್ ಸರ್ಕಾರ ನೆಡಿಸಿತು. ಕಾಫಿ, ಟೀ ತೋಟಗಳನ್ನೂ ರೂಪಿಸತೊಡಗಿದರು ಬ್ರಿಟಿಷರು. ಮಹಾಗನಿ, ಕರ್ಪೂರ, ಸಿಂಕೋನದಂತಹ ವಾಣಿಜ್ಯ ಬೆಳೆಗಳಿಗೂ ಪ್ರೋತ್ಸಾಹವಿತ್ತರು. ಆದರೆ, ಷಹರಣ್‌ಪುರ ಉದ್ಯಾನದಲ್ಲೂ ನಿರೀಕ್ಷಿತ ಯಶಸ್ಸು ಕಾಣಲಿಲ್ಲ. ದಿಢೀರ್ ಲಾಭ ಸಿಗದ ಈ ಉದ್ಯಾನವನ್ನೂ ಬ್ರಿಟಿಷರು ಅಲಕ್ಷಿಸಿದರು. ಅಲ್ಲಿದ್ದ ಅಮೂಲ್ಯ ಸಂಪತ್ತು ಹಾಳಾಯಿತು. ಈಗ 'ಕಂಪನಿ ಉದ್ಯಾನ'ವೆಂದು ಕರೆಸಿಕೊಳ್ಳುವ ಷಹರಣ್‌ಪುರ ಉದ್ಯಾನ 'ತೋಟಗಾರಿಕಾ ತರಬೇತಿ ಕೇಂದ್ರ'ವೊಂದನ್ನು ಹೊಂದಿದೆಯಾದರೂ ಲಾಲ್‌ಬಾಗ್‌ನ ಯಾವ ವರ್ಚಸ್ಸೂ ಅದಕ್ಕಿಲ್ಲ.

ಇನ್ನೂರು ವರ್ಷಗಳ ಅವಧಿಯಲ್ಲಿ ಲಾಲ್‌ಬಾಗ್ 40 ಎಕರೆಗಳಿಂದ 240 ಎಕರೆಗಳಿಗೆ ವಿಸ್ತರಣೆಯಾಗಿದೆ. ವಿಶ್ವಮಾನ್ಯ ಸಸ್ಯೋದ್ಯಾನವಾಗಿ ಬೆಳೆದಿದೆ. ವರ್ಷಕ್ಕೆರಡು ಬಾರಿ ನಡೆಯುವ ಫಲಪುಷ್ಪ ಪ್ರದರ್ಶನಕ್ಕೆ ಮದುವಣಗಿತ್ತಿಯಂತೆ ಸಿದ್ಧಗೊಂಡು ದೇಶ ವಿದೇಶಗಳ ಅಪಾರ ವೀಕ್ಷಕರನ್ನು ಸೆಳೆಯುತ್ತಿದೆ. ಶತಮಾನ ಕಂಡಿರುವ ಬೃಹತ್ ಗಾಜಿನಮನೆ, ಜಪಾನ್, ಮೊಘಲ್ ಹಾಗೂ ಇಟಾಲಿಯನ್ ಅಲಂಕಾರೋದ್ಯಾನ ರಚನೆಗಳು, 250–300 ವರ್ಷಗಳ ಮರಗಳು ತುಂಬಿರುವ ಲಾಲ್‌ಬಾಗ್ ಸದಾ ಪ್ರವಾಸಿಗಳನ್ನು ಆಕರ್ಷಿಸುವ ಉದ್ಯಾನವಾಗಿದೆ.

ಪ್ರಪಂಚದ ವಿವಿಧ ಸ್ಥಳಗಳಿಂದ ತಂದು ಬೆಳೆಸಿದ ಸಸ್ಯಗಳಿಂದ ತೋಟಗಾರಿಕಾ ತಜ್ಞರ ಗಮನ ಸೆಳೆದಿರುವ ಲಾಲ್‌ಬಾಗ್ ಬ್ರಿಟಿಷರಿಂದ ನಿರಾಕರಣೆಯಾಗಿದ್ದಕ್ಕೆ ನೈಜ ಕಾರಣಗಳನ್ನು ಬ್ರಿಟಿಷ್ ಸರ್ಕಾರದ ಕಾಗದ ಪತ್ರಗಳಿಂದ ಹೆಕ್ಕಿ ತೆಗೆದು ಲಾಲ್‌ಬಾಗ್ ಇತಿಹಾಸದಲ್ಲಿ ದಾಖಲು ಮಾಡಿದ ಕೀರ್ತಿ ತೋಟಗಾರಿಕಾ ತಜ್ಞ ಹಾಗೂ ಇತಿಹಾಸಕಾರ ಡಾ. ಎಸ್. ನಾರಾಯಣಸ್ವಾಮಿ ಅವರಿಗೆ ಸಲ್ಲಬೇಕು. ■

